ಜೀವನದ ಗುರಿ ತಲುಪುವಲ್ಲಿ ನನ್ನ ಜತೆಗಾರ್ತಿ. ಇದರ ಲಾಲನೆಪಾಲನೆಯಲ್ಲಿ ಕಿಂಚಿತ್ತೂ ಧಕ್ಕೆಯಾಗಬಾರದು. ನಾವು ಊಟಮಾಡದಿದ್ದರೂ ಸರಿಯೇ, ಇದರ ಪೋಷಣೆ ಸರಿಯಾಗಿ ನಡೆಯಬೇಕು. ಆರೋಗ್ಯ ಏರುಪೇರಾಗಬಾರದು. ತಿಳಿಯಿತಾ?' ಗರ್ಜಿಸಿದ ಅರಬಿ.

ದೀಪಕ್ 'ಓಕೆ, ಓಕೆ' ಎಂದು ಪುನಃ ತಲೆಯಾಡಿಸಿದ.

'ಪ್ರಶಸ್ತಿಗಳು ಸಿಗದೆ ಎಲ್ಲಿಹೋಗುತ್ತವೆ ನೋಡಿಯೇ ಬಿಡೋಣ ಬಾ...' ಎನ್ನುತ್ತ ಗಿಡುಗವನ್ನು ಎತ್ತಿಕೊಂಡು ತರಬೇತಿಗೆ ಮುಂದಾದ.

'ಆ ಚೀಲದೊಳಗೆ ದಾರಕ್ಕೆ ಕಟ್ಟಿದ ಬೈಟ್ ಇದೆ, ಅದನ್ನು ತಾ...' ಎಂದ.

ದೀಪಕ್ ಚೀಲ ತಂದುಕೊಟ್ಟ. ಗಿಡುಗವನ್ನು ದೀಪಕನ ಕೈಗೆ ಹಸ್ತಾಂತರಿಸಿದ. ಈ ಬಾರಿ ಗಿಡುಗ ಈತನನ್ನೇ ನೋಡುತ್ತ ಕೈಯಲ್ಲೇ ಕುಳಿತುಕೊಂಡಿತು. 'ಈಗ ಅವಳಿಗೆ ನಿನ್ನ ಮೇಲೆ ಪ್ರೀತಿ ಹುಟ್ಟಿದೆ' ಎಂದು ಹೇಳಿ ನಕ್ಕ ಅರಬಿ. 'ಇಲ್ನೋಡು, ನೀನು ಅಲ್ಲಿ ದೂರದಲ್ಲಿ ನಿಂತು ಇದನ್ನು ಹೀಗೆ ಆಕಾಶದಲ್ಲಿ ಬೇರೆ ಬೇರೆ ಕೋನದಲ್ಲಿ ಬೀಸಿ ಒಗೆಯುತ್ತಿರು' ಎಂದು ಮಾಡಿ ತೋರಿಸಿದ. ದೀಪಕ್ ಗಿಡುಗವನ್ನು ವಾಪಸ್ ಅರಬಿಯ ಕೈಗೆ ಹಸ್ತಾಂತರಿಸಿ ಸುಮಾರು ನೂರು ಮೀಟರ್ ದೂರ ನಡೆದು ಅರಬಿ ಹೇಳಿದ ಹಾಗೆಯೇ ಗಾಳಿಯಲ್ಲಿ ಬೀಸುತ್ತ ನಿಂತ.

'ನಾನು ಸೂಚನೆ ಕೊಟ್ಟಾಗ ಮಾತ್ರ' ಕೂಗಿ ಹೇಳಿದ ಅರಬಿ, ತಾನು ಆಗಾಗ ಗಿಡುಗನಿಗೆ ಮಾಂಸದ ತುಣುಕುಗಳನ್ನು ಕೊಡುತ್ತ ತರಬೇತು ಆರಂಭಿಸಿದ. ನಡು ನಡುವೆ ಗಿಡುಗವನ್ನು ಮೇಲೆ ಹಿಡಿದು ದೀಪಕನಿಗೆ ಸೂಚನೆಯಿತ್ತು ಹಾರಿಸಿ ಬಿಡುತ್ತಿದ್ದ. ಅದು ನೇರ ಹಾರಿಬಂದು ಬೈಟನ್ನು ಕಚ್ಚಿ ಹಿಂದೆ ಹಾರಿಹೋಗಿ ಆತನ ಚಾಚಿದ್ದ ಕೈಯಲ್ಲಿ ಕುಳಿತುಕೊಳ್ಳಬೇಕಿತ್ತು. ಬೈಟ್ ಸರಿಯಾಗಿ ಕೊಕ್ಕಿನಲ್ಲಿಯೋ ಕಾಲಿನಲ್ಲಿಯೋ ಹಿಡಿದು ತಂದರೆ ಮಾಂಸದ ತುಣುಕಿನ ಇನಾಮು. ಇಲ್ಲದೇ ಹೋದರೆ ಇಲ್ಲ. ಗಾದಾ ಬೈಟ್ ಆಕ್ರಮಿಸಿ ಕೊಂಡುಹೋದರೆ ದೀಪಕ್ ಇನ್ನೊಂದು ಬೈಟ್ ಸಿಕ್ಕಿಸಿ ತನ್ನ ಮುಂದಿನ ಸರದಿಗೆ ಕಾಯುತ್ತಿದ್ದ.

ಅಸಾಧ್ಯ ಬಿಸಿಲು ಅಡಿಯಿಂದ ಮುಡಿಯವರೆಗೂ ಬೆವರು ಇಳಿಸಿತ್ತು. ಹಾಕಿದ್ದ ಚಡ್ಡಿ, ಪ್ಯಾಂಟು, ಬನಿಯನ್ನು, ಶರ್ಟು ಎಲ್ಲವೂ ಒದ್ದೆಯಾಗಿ ಹೋಗಿದ್ದವು. ದೀಪಕನಿಗೆ ತಲೆಯಸುತ್ತ ಬೆಂಕಿಯಂತಿದ್ದ ಬಿಸಿಗಾಳಿಯ ಪ್ರಭಾವಳಿಯ ಅನುಭವವಾಗುತ್ತಿತ್ತು. ಸತತವಾಗಿ ಎರಡು ಗಂಟೆಗಳ ತರಬೇತಿ, ಆಮೇಲೆ ಅರ್ಧಗಂಟೆ ಹತ್ತಿರದ ಮರದಡಿ ವಿಶ್ರಾಂತಿ, ಪುನಃ ತರಬೇತಿ, ಹೀಗೆ ನಾಲ್ಕು ಗಂಟೆಯವರೆಗೂ ತರಬೇತಿ ಮುಂದುವರಿದಿತ್ತು. ದೀಪಕ್ ಬಸವಳಿದು ಹೋಗಿದ್ದ. ಅರಬಿಯೂ ಸೋತುಹೋಗಿದ್ದ, ಆದರೆ ತೋರಿಸಿಕೊಳ್ಳುತ್ತಿರಲಿಲ್ಲ. ಗಾದಾ ಮಾತ್ರ ಸಿಕ್ಕಿದ ಮಾಂಸದ ತುಣುಕುಗಳಿಗೂ ಹಾರಾಟದ ಅವಕಾಶಕ್ಕೂ ಆಗಾಗ ರೆಕ್ಕೆ ಬಡಿದು ಸಂತಸ ವ್ಯಕ್ತಪಡಿಸುತ್ತಿದ್ದಳು!

ನಾಲ್ಕು ಗಂಟೆ ಹೊತ್ತಿಗೆ 'ಇವತ್ತಿಗೆ ಸಾಕು' ಎಂದು ಗಿಡುಗದೊಡನೆ ಮರಳಿ ಬಂದು ವಾಹನವೇರಿದ ಅರಬಿ. ತಂದಿದ್ದ ಪರಿಕರಗಳನ್ನೆಲ್ಲ ವಾಪಸ್ಸು ಡಿಕ್ಕಿಗೆ ಸೇರಿಸಿ ದೀಪಕನೂ ಗಾಡಿ ಹತ್ತಿ ಕುಳಿತ. ವಾಹನದ ಏಸಿಯ ಗಾಳಿ ಮೈಗೆ ಸೋಕಿದೊಡನೆ ದೀಪಕನಿಗೆ ಹೋದ ಜೀವ ಮರಳಿದಂತಾಗಿತ್ತು. ಗಲ್ಫಿನಲ್ಲಿ ಉದ್ಯೋಗ, ಕೈತುಂಬ ಹಣ, ಏಸಿ ಕಾರುಗಳಲ್ಲಿ ಓಡಾಟ, ಸ್ಥಿತಿವಂತರ ಮಗಳೊಂದಿಗೆ ಮದುವೆ... ಕಂಡ ಕನಸುಗಳೆಷ್ಟೋ! ಬಂದು ನಿಂತದ್ದು ಬಿರುಬಿಸಿಲಿನ ಜಳಕದ ಈ ಕೆಲಸಕ್ಕೆ. ಒಳ್ಳೆಯ ಸಂಬಳವಾದರೂ ಸಿಗುತ್ತಾ? ಬಾಯಿಬಿಡಲೊಲ್ಲದ ಅರಬಾಬ್!... ದೀಪಕ್ ತನ್ನ ಸ್ಥಿತಿಗೆ ತಾನೇ ಮರುಕಪಟ್ಟುಕೊಂಡ.